**ದಿನಾಂಕಃ 17.03.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಎನ್ ಎಸ್., 1 ಮತ್ತು 3 ನೇ ಪ್ರತಿವಾದಿ ಪರ ವಕೀಲರಿಂದ**

**2.** ನಾನು ಬಿ ಇ ಪದವಿಧರ. ನನ್ನ ತಂದೆ 2 ನೇ ಪ್ರತಿವಾದಿ ನಿವೃತ್ತ ಗ್ರಾಮ ಲೆಕ್ಕಾಧಿಕಾರಿ. ನಾನು ಮತ್ತು ನನ್ನ ತಂದೆ ಖಾಯಂ ಕೋಲಾರದ ನಿವಾಸಿ ಎಂದರೆ ಸರಿ. ನನ್ನ ತಂದೆಯ ತಂದೆ ಸ್ವಂತ ಊರು ಕಮ್ಮದಟ್ಟಿ ಕಾಮನೂರು ಎಂದರೆ ಸರಿ. ನಾನು ಕೋಲಾರ ಎಸ್ ಎನ್ ಆರ್ ಆಸ್ಪತ್ರೆಯಲ್ಲಿ ಜನಿಸಿರುತ್ತೇನೆ. ನನ್ನ ತಂದೆ ಹುಟ್ಟಿ ಬೆಳೆದಿದ್ದು ಕಮ್ಮದಟ್ಟಿ ಕಾಮನೂರು ಎಂದರೆ ಸರಿಯಲ್ಲ. ಸಾಕ್ಷಿಯೂ ಮುಂದುವರೆದು ಚಿಕ್ಕ ಬೇವಹಳ್ಳಿ ಎಂದು ನುಡಿಯುತ್ತಾರೆ. ನಾನು ಓದಿರುವುದು ಕೋಲಾರದ ಪಟ್ಟಣದಲ್ಲಿ ಎಂದರೆ ಸರಿ.

**3.** ನನ್ನ ತಂದೆ ಲಂಚ ಪಡೆದಿರುವ ವಿಚಾರವಾಗಿ ಅವರ ವಿರುದ್ಧ ಪ್ರಕರಣ ದಾಖಲಾಗಿತ್ತು ಎಂದರೆ ಸರಿ. ಸಾಕ್ಷಿಯೂ ಮಂದುವರೆದು ಸದರಿ ಪ್ರಕರಣ ಮುಕ್ತಾಯವಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಪ್ರಕರಣದಲ್ಲಿ ನನ್ನ ತಂದೆಗೆ ಶಿಕ್ಷೆಯಾಗಿ 8 ತಿಂಗಳು ಜೈಲಿನಲ್ಲಿದ್ದರು ಎಂದರೆ ಸರಿ. ನನ್ನ ತಂದೆ ಶಿಕ್ಷೆ ಯಾಗಿರುವುದನ್ನು ಪ್ರಶ್ನಿಸಿ ಅವರು ಮೇಲ್ಮನವಿ ಸಲ್ಲಿಸಿರಲಿಲ್ಲ ಎಂದರೆ ಸಾಕ್ಷಿಯೂ ಸುಪ್ರೀಂ ಕೋರ್ಟ್ ವರೆಗೂ ಹೋಗಿದ್ದರು ಎಂದು ನುಡಿಯುತ್ತಾರೆ. ನಾನು ನಿಪಿ-1 ಮತ್ತು 15 ರಂತೆ 2 ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುವ ಕಾರಣ ಏನೂ ಎಂದರೆ ಸಾಕ್ಷಿಯೂ ನನಗೆ ಸರಿಯಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.

**4.** ಕಮ್ಮದಟ್ಟಿ ಕಾಮನೂರು ಗ್ರಾಮದಲ್ಲಿರುವ ಎಲ್ಲಾ ಆಸ್ತಿಗಳು ನನ್ನ ತಂದೆಯ ತಂದೆ ಅಂದರೆ ನನ್ನ ತಾತ ರಾಮಯ್ಯ @ ಚಿಕ್ಕರಾಮಯ್ಯ ಆಸ್ತಿಗಳು ಎಂದರೆ ಸರಿ. ಸದರಿ ಆಸ್ತಿಗಳಿಗೆ ಸಂಬಂದಿಸಿದಂತೆ ನನ್ನ ಅತ್ತೆಯಂದಿರಾದ ಸೊಣ್ಣಮ್ಮ ಮತ್ತು ಜಯಲಕ್ಷ್ಮಮ್ಮ ವಿಭಾಗ ಕೋರಿ ನಿಪಿ-30 ರಂತೆ ಇದೇ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯೂ ಡಿಕ್ರಿಯಾಗಿ ಅವರವರ ಭಾಗಕ್ಕೆ ಕೊಡಬೇಕಾದ ಜಮೀನನ್ನು ಕೊಡಲಾಗಿದೆ ಎಂದರೆ ಸರಿ.

**5.** ನಿಪಿ–15 ವಂಶವೃಕ್ಷದಲ್ಲಿ ನಮ್ಮ ಕುಟುಂಬದ ಮೂಲ ಪುರುಷ ಮುನಿಸ್ವಾಮಿ ಎಂದು ತೋರಿಸಲಾಗಿದೆ ಎಂದರೆ ಸರಿ. ಸದರಿ ಮುನಿಸ್ವಾಮಿ ಬೇವಹಳ್ಳಿ ಗ್ರಾಮದವರು ಎಂದರೆ ಸರಿ. ಸದರಿ ಮುನಿಸ್ವಾಮಿ ರವರಿಗೆ ಮುನಿವೆಂಕಟಪ್ಪ ಎಂಬ ಒಬ್ಬನೇ ಮಗ ಎಂದರೆ ನನಗೆ ಗೊತ್ತಿಲ್ಲ. ಸದರಿ ಮುನಿವೆಂಕಟಪ್ಪನ ರವರು ಎಳಮ್ಮ ರವರನ್ನು ಮದುವೆ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಬಿ. ರಾಮಕೃಷ್ಣಪ್ಪ ಬಿನ್ ಬೈರಪ್ಪ ನನಗೆ ಮಾವನಾಗಬೇಕು. ಬಿ. ರಾಮಕೃಷ್ಣಪ್ಪ ರವರು ತಯಾರಿಸಿ ಕೊಟ್ಟಂತಹ ವಂಶವೃಕ್ಷವನ್ನು ನಾನು ನಿಪಿ–15 ರಂತೆ ಹಾಜರು ಪಡಿಸಿರುತ್ತೇನೆಂದರೆ ಸರಿ.

**6.** ಮುನಿವೆಂಕಟಪ್ಪ ಬಿನ್ ಮುನಿಸ್ವಾಮಿ ರವರಿಗೆ 4 ಜನ ಮಕ್ಕಳು ಅವರುಗಳೆಂದರೆ 1) ಬುಡ್ಡಪ್ಪ, 2) ದೊಡ್ಡಮುನಿಸ್ವಾಮಿ, 3) ಚಿಕ್ಕಮುನಿಸ್ವಾಮಿ ಹಾಗೂ 4) ವೆಂಕಟರಾಮಣ್ಣ ಎಂದರೆ ಸರಿ. ದೊಡ್ಡಮುನಿಸ್ವಾಮಿ ಹೆಂಡತಿಯ ಹೆಸರು ಕೂಡ ಎಳಮ್ಮ ಎಂದರೆ ಸರಿ. ದೊಡ್ಡಮುನಿಸ್ವಾಮಿ ಹಾಗೂ ಎಳಮ್ಮ ರವರಿಗೆ ಯಾವುದೇ ಸಂತತಿ ಇರುವುದಿಲ್ಲ ಎಂದರೆ ಸರಿ. ಅವರಿಗೆ ಮಕ್ಕಳಿಲ್ಲದೇ ಇರುವ ಕಾರಣಕ್ಕೆ ಈ ದಾವೆಯ 1 ನೇ ಪ್ರತಿವಾದಿಯಾದ ಕೆ.ಆರ್. ನಂಜುಂಡಪ್ಪ @ ಚಿಕ್ಕ ನಂಜುಂಡಪ್ಪ ರವರನ್ನು ಸಾಕಿಕೊಂಡಿದ್ದರು ಎಂದರೆ ಸರಿಯಲ್ಲ.

**7.** 1 ನೇ ಪ್ರತಿವಾದಿಯಾದ ಕೆ.ಆರ್. ನಂಜುಂಡಪ್ಪ @ ಚಿಕ್ಕ ನಂಜುಂಡಪ್ಪ ರವರು ಈ ದಾವೆಯಲ್ಲಿ ಸಲ್ಲಿಸಿರುವ ಪ್ರತಿವಾದ ಪತ್ರದ ಅಂಶಗಳನ್ನು ಓದಿಸಿ ತಿಳಿದುಕೊಂಡಿರುತ್ತೇನೆ. ಅವರು ತಮ್ಮ ಪ್ರತಿವಾದ ಪತ್ರದಲ್ಲಿ ನೊಂದಣಿ ಕರಾರನ್ನು ಮಾಡಿಕೊಂಡಿರುವ ಬಗ್ಗೆ ಉಲ್ಲೇಖಿಸಿರುವ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸದರಿ ಕರಾರು ಪತ್ರದಲ್ಲಿ 1 ನೇ ಪ್ರತಿವಾದಿಯಾದ ಕೆ.ಆರ್. ನಂಜುಂಡಪ್ಪ @ ಚಿಕ್ಕ ನಂಜುಂಡಪ್ಪ ರವರನ್ನು ದೊಡ್ಡ ಮುನಿಸ್ವಾಮಿ ರವರು ತನ್ನ ಸಾಕು ಮಗ ಎಂದು ಉಲ್ಲೇಖಿಸಿರುತ್ತಾರೆ ಎಂದರೆ ಸರಿಯಲ್ಲ.

**8.** ಬುಡ್ಡಪ್ಪ ರವರು ಕಾಮಾಕ್ಷಮ್ಮ ರವರನ್ನು ಮದುವೆ ಮಾಡಿಕೊಂಡಿದ್ದರು ಎಂದರೆ ಸರಿ. ಸದರಿಯವರಿಗೆ 5 ಜನ ಮಕ್ಕಳು ಎಂದರೆ ಸರಿ. ಅವರುಗಳೆಂದರೆ 1) ಸುಬ್ಬರಾಯಪ್ಪ, 2) ಮುನಿಸ್ವಾಮಿ, 3) ತಿಮ್ಮಯ್ಯ, 4) ವೆಂಕಟಪ್ಪ @ ಮಠದಪ್ಪ ಹಾಗೂ 5) ಬೈರಪ್ಪ. ಸುಬ್ಬರಾಯಪ್ಪ ರವರು ಸಕ್ಕಮ್ಮ ರವರನ್ನು ಮದುವೆ ಮಾಡಿಕೊಂಡಿದ್ದು ಅವರಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ.

**9.** ಮುನಿಸ್ವಾಮಿ ರವರನ್ನು ಎಳಮ್ಮ ರವರನ್ನು ಮದುವೆ ಮಾಡಿಕೊಂಡಿದ್ದು ಅವರಿಗೆ ಇಬ್ಬರೂ ಮಕ್ಕಳು ಎಂದರೆ ಸರಿ. ಅವರುಗಳೆಂದರೆ 1) ಮುನಿವೆಂಕಟಪ್ಪ ಹಾಗೂ 2) ಬುಡ್ಡಪ್ಪ ಎಂದರೆ ಸರಿ. ಮುನಿವೆಂಕಟಪ್ಪ ರವರು ಮುನಿಯಮ್ಮನನ್ನು ಮದುವೆ ಮಾಡಿಕೊಂಡಿದ್ದು ಅವರಿಗೆ ಸರೋಜಮ್ಮ ಮತ್ತು ವೆಂಕಟಮ್ಮ ಎಂಬ ಇಬ್ಬರು ಹೆಣ್ಣು ಮಕ್ಕಳು ಎಂದರೆ ಸರಿ. ಬುಡ್ಡಪ್ಪ ರವರು ಬೀರಮ್ಮ ನನ್ನು ಮದುವೆ ಮಾಡಿಕೊಂಡಿದ್ದರು ಎಂದರೆ ಸರಿ.

**10.** ತಿಮ್ಮಯ್ಯ ಬಿನ್ ಬುಡ್ಡಪ್ಪ ರವರು ಮುನಿವೆಂಕಟಮ್ಮನನ್ನು ಮದುವೆ ಮಾಡಿಕೊಂಡಿದ್ದು, ಅವರಿಗೆ 4 ಜನ ಮಕ್ಕಳು ಎಂದರೆ ಸರಿ. ಅವರುಗಳೆಂದರೆ 1) ಚಿಕ್ಕಪಾಪಯ್ಯ, 2) ದೊಡ್ಡಮ್ಮಯ್ಯ, 3) ಎಳಮ್ಮ @ ಚಿಕ್ಕಮ್ಮಯ್ಯ ಹಾಗೂ 4) ಸಾಮಕ್ಕ ಎಂದರೆ ಸರಿ. ಚಿಕ್ಕಪಾಪಯ್ಯ ರವರು ಚೌಡಮ್ಮ ರವರನ್ನು ಮದುವೆ ಮಾಡಿಕೊಂಡಿದ್ದು ಅವರಿಗೆ ಇಬ್ಬರೂ ಮಕ್ಕಳು ಎಂದರೆ ಸಾಕ್ಷಿಯೂ ಒಟ್ಟು 5 ಜನ ಅವರುಗಳ ಪೈಕಿ ಇಬ್ಬರೂ ಗಂಡು ಮಕ್ಕಳು ಹಾಗೂ 3 ಜನ ಹೆಣ್ಣು ಮಕ್ಕಳು ಎಂದು ನುಡಿಯುತ್ತಾರೆ. ಅವರುಗಳೆಂದರೆ 1) ಪಿ.ನಾರಾಯಣಸ್ವಾಮಿ, 2) ಪಿ. ಅಪ್ಪೋಜ್ಜಿ , 3) ಕಾಮಾಕ್ಷಿ ಹಾಗೂ ಇನ್ನಿಬ್ಬರೂ ಹೆಣ್ಣು ಮಕ್ಕಳು ಇದ್ದು ಅವರ ಹೆಸರು ಹೇಳಲು ಬರುವುದಿಲ್ಲ.

**11.** ದೊಡ್ಡಮ್ಮಯ್ಯ ನನ್ನು ಬೋಡಿ ಬಂಡೆ ಹೊಸೂರು ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿದ್ದು ಅವರಿಗೆ ಎಷ್ಟು ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ.

**12.** ಎಳಮ್ಮ @ ಚಿಕ್ಕಮ್ಮಯ್ಯ ನನ್ನ ಅಜ್ಜಿ ಎಂದರೆ ಸರಿ. ಅವರನ್ನು ಕಮ್ಮದಟ್ಟಿ ಕಾಮನೂರಿನ ಚಿಕ್ಕರಾಮಯ್ಯ @ ರಾಮಯ್ಯ ರವರಿಗೆ ಮದುವೆ ಮಾಡಿಕೊಡಲಾಗಿತ್ತು ಎಂದರೆ ಸರಿ. ನನ್ನ ಅಜ್ಜಿಯ ಮದುವೆ ಆದಾಗಿನಿಂದ ಕಮ್ಮದಟ್ಟಿ ಕಾಮನೂರು ಗ್ರಾಮದಲ್ಲಿಯೇ ಇದ್ದುದ್ದು ಎಂದರೆ ಸರಿಯಲ್ಲ. ಸಾಕ್ಷಿಯೂ ಬೇವಹಳ್ಳಿ ಗ್ರಾಮದಲ್ಲಿದ್ದರೂ ಎಂದು ನುಡಿಯುತ್ತಾರೆ. ನನ್ನ ಅಜ್ಜಿ ಬೇವಹಳ್ಳಿ ಗ್ರಾಮದಲ್ಲಿದ್ದ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿರುತ್ತೀನಾ ಎಂದರೆ ಸಾಕ್ಷಿಯೂ ಅವರು ಅಲ್ಲಿಯೇ ಇದ್ದುದ್ದು ಆದ್ದರಿಂದ ಹೇಳುತ್ತಿದ್ದೇನೆ ದಾಖಲೆಗಳನ್ನು ಕೊಟ್ಟಿಲ್ಲ ಎಂದರೆ ಈ ಮುಂದೆ ಹಾಜರು ಪಡಿಸುತ್ತೇನೆಂದು ನುಡಿಯುತ್ತಾರೆ.

**13.** ಈ ದಾವೆಯ ಪ್ರತಿವಾದಿಗಳೆಲ್ಲರೂ ನನ್ನ ಅಜ್ಜಿ ಎಳಮ್ಮ @ ಚಿಕ್ಕಮ್ಮಯ್ಯನ ಮಕ್ಕಳು ಎಂದರೆ ಸರಿ.

**14.** ಸಾಮಕ್ಕನಿಗೆ ಒಟ್ಟು 4 ಜನ ಮಕ್ಕಳು ಅವರುಗಳೆಂದರೆ 1) ಅನಸೂಯ, 2) ಈರಮ್ಮ ಹಾಗೂ ಇಬ್ಬರೂ ಗಂಡು ಮಕ್ಕಳು ಇದ್ದು ಅವರ ಹೆಸರು ಹೇಳಲು ನೆನಪಿರುವುದಿಲ್ಲ.

**15.** ದೊಡ್ಡಮ್ಮಯ್ಯ ಹಾಗೂ ಸಾಮಕ್ಕನ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಸೇರಿಸಿಲ್ಲ ಎಂದರೆ ಸರಿ.

**16.** ನಾನು ಈ ದಾವೆಯನ್ನು ನನ್ನ ಅಜ್ಜಿ ಎಳಮ್ಮ @ ಚಿಕ್ಕಮ್ಮಯ್ಯ ರವರ ಪಿತ್ರಾರ್ಜಿತ ಆಸ್ತಿಗಳಿಗೆ ಸಂಬಂದಿಸಿದಂತೆ ದಾಖಲಿಸಿರುತ್ತೇನೆಂದರೆ ಸರಿ. ನನ್ನ ಅಜ್ಜಿ ಎಳಮ್ಮ @ ಚಿಕ್ಕಮ್ಮಯ್ಯ ರವರಿಗೆ ಅವರ ತಂದೆ ತಿಮ್ಮಯ್ಯ ರವರಿಗೆ ಎಷ್ಟು ಆಸ್ತಿಗಳು ಬಂದಿರುತ್ತವೆ ಎಂದು ನನಗೆ ಗೊತ್ತಿಲ್ಲ. ತಿಮ್ಮಯ್ಯನ ಆಸ್ತಿಗಳೆಲ್ಲವೂ ಆತನ ಮಗನಾದ ಚಿಕ್ಕಪಾಪಯ್ಯನ ಹೆಸರಿನಲ್ಲಿರುತ್ತವೆ. ಚಿಕ್ಕಪಾಪಯ್ಯ ತೀರಿಕೊಂಡ ನಂತರ ಆತನ ಮಕ್ಕಳಾದ ಪಿ.ನಾರಾಯಣಸ್ವಾಮಿ ಹಾಗೂ ಪಿ.ಅಪ್ಪೊಜ್ಜಿ ರವರ ಹೆಸರಿನಲ್ಲಿ ಫವತಿ ಖಾತೆಯಾಗಿರುತ್ತವೆ.

**17.** ನನ್ನ ಅಜ್ಜಿ ಎಳಮ್ಮ @ ಚಿಕ್ಕಮ್ಮಯ್ಯ ರವರಿಗೆ ಅವರ ತಾತ ಬುಡ್ಡಪ್ಪನ ಕಡೆಯಿಂದ ಯಾವುದೇ ಆಸ್ತಿಗಳು ಬಂದಿರುವುದಿಲ್ಲ ಎಂದರೆ ಸರಿ.

**18.** ಪಿ.ನಾರಾಯಣಸ್ವಾಮಿ ಹಾಗೂ ಪಿ.ಅಪ್ಪೊಜ್ಜಿ ರವರ ಹೆಸರಿನಲ್ಲಿ ಎಷ್ಟು ಆಸ್ತಿಗಳು ನಮೂದು ಇರುತ್ತವೆ ಎಂದು ಹೇಳಲು ಬರುವುದಿಲ್ಲ. 1 ಮತ್ತು 3 ನೇ ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರದಲ್ಲಿ ಪಿ.ನಾರಾಯಣಸ್ವಾಮಿ ಹಾಗೂ ಪಿ.ಅಪ್ಪೊಜ್ಜಿ ರವರಿಗೆ ಯಾವವ ಆಸ್ತಿಗಳು ಅವರ ತಂದೆಯಿಂದ ಬಂದಿರುತ್ತವೆ ಎಂದು ಹೇಳಿ ಬರೆಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ತಿಮ್ಮಯ್ಯನಿಗೆ ಬಂದಂತಹ ಆಸ್ತಿಗಳಲ್ಲಿ ಆತನ ಎಲ್ಲಾ ಮಕ್ಕಳಿಗೂ ಹಕ್ಕು ಇರುತ್ತದೆ ಎಂದರೆ ಸರಿ. ತಿಮ್ಮಯ್ಯನಿಗೆ ಬಂದಂತಹ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ.

(ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇಳಿ ಕೇಳಿ ಸರಿ ಇದೆ.

(ಗೌಡ ಜಗದೀಶ ರುದ್ರೆ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಮುಳಬಾಗಿಲು.